## ಮುಖಚಿತ್ರದ ವಿವರಣೆ



# ಬೇಲೂರು ಮಠದಲ್ಲಿ ದುರ್ಗಾಪೂಜೆ

ಬೇಲೂರು ಮಠದಲ್ಲಿ ದುರ್ಗಾಪೂಜೆಯನ್ನು ಆಚರಿಸುವ ಪದ್ಧತಿ ೧೯೦೧ರಿಂದ ಆರಂಭವಾಯಿತು. ಕೆಲವು ವರ್ಷ ಪ್ರತಿಮೆಯನ್ನು ಪೂಜಿಸಿ ದುರ್ಗಾಪೂಜೆ ಮಾಡುತ್ತಿರಲಿಲ್ಲ. ಬಾರಾನಗರ ಮಠದಲ್ಲಿ ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರು ಪ್ರತಿಮೆಯಿಲ್ಲದೆ ಸಣ್ಣ ಪ್ರಮಾಣದಲ್ಲಿ ದುರ್ಗಾಪೂಜೆ ಮಾಡಿದ್ದರು. ಸ್ವಾಮಿ ವಿವೇಕಾನಂದರೇ ಬೇಲೂರು ಮಠದಲ್ಲಿ ಮೊದಲ ಬಾರಿಗೆ ಪ್ರತಿಮೆಯನ್ನಿಟ್ಟು ದುರ್ಗಾಪೂಜೆ ಮಾಡುವ ಪದ್ಧತಿಯನ್ನು ಆರಂಭಿಸಿದರು. ಸಂಪ್ರದಾಯದ ಪ್ರಕಾರ ಸಂನ್ಯಾಸಿಯು ಈ ಬಗೆಯ ಪೂಜಾಕ್ರಮಗಳನ್ನು ಮಾಡಲು ಸಾಧ್ಯವಿಲ್ಲ; ಹಾಗಿದ್ದರೂ ಸ್ವಾಮೀಜಿ ಈ ಪದ್ಧತಿಯನ್ನೇಕೆ ಆರಂಭಿಸಿದರು? ಮೊದಲನೆಯ ಕಾರಣ, ಹೊಸ ಬಗೆಯ ಸಂನ್ಯಾಸೀ ಸಂಘವನ್ನು ಆರಂಭಿಸಿದ ಸ್ವಾಮೀಜಿಯವರ ವಿಚಾರಗಳನ್ನು ಆಗಿನ ಕಾಲದ ಸಮಾಜ ಇನ್ನೂ ಸ್ವೀಕರಿಸಿರಲಿಲ್ಲ; ಸಾಕಷ್ಟು ವಿರೋಧವೂ ಇತ್ತು. ದುರ್ಗಾಪೂಜೆಯನ್ನು ಸಾರ್ವಜನಿಕವಾಗಿ ಆಚರಿಸುವುದರಿಂದ ಈ ಭಾವನೆ ಕಡಿಮೆಯಾಗುವುದೆಂದು ಸ್ವಾಮೀಜಿ ದುರ್ಗಾಪೂಜೆಯನ್ನು ಆರಂಭಿಸಿರಬಹುದು. ಎರಡನೇ ಕಾರಣ, ಮಾತೃಪೂಜೆಯನ್ನು ಹೆಚ್ಚು ವ್ಯಾಪಕಗೊಳಿಸುವ ಅಗತ್ಯವನ್ನು ಸ್ವಾಮೀಜಿ ಮನಗಂಡಿದ್ದರು. ಪ್ರಖ್ಯಾತ ದೇಶಗಳು ಅಷ್ಟೊಂದು ಅಭಿವೃದ್ಧಿ ಹೊಂದಲು ಕಾರಣ, ಅಲ್ಲಿರುವ ಸ್ತ್ರೀ ಸ್ವಾತಂತ್ರ್ಯ ಹಾಗೂ ಸ್ತ್ರೀಗೆ ಅಲ್ಲಿ ಲಭಿಸಿದ ಸಮಾನತೆ ಎಂಬುದು ಸ್ವಾಮೀಜಿಗೆ ಮನದಟ್ಟಾಗಿತ್ತು. ಅದಕ್ಕಿಂತಲೂ ಹೆಚ್ಚಿನ ಗೌರವವನ್ನು ನೀಡಿ ಸ್ತ್ರೀಯನ್ನು ಜಗನ್ಮಾತೆಯೆಂದು ಪೂಜಿಸುವ ನಮ್ಮ ದೇಶದಲ್ಲಿ, ಪ್ರಾಯೋಗಿಕ ಬದುಕಿನಲ್ಲಿ ಮಾತ್ರ ಮಹಿಳೆಯರು ಪುರುಷರ ಅಧೀನರಾಗಿ ಎಲ್ಲ ಸ್ವಾತಂತ್ರ್ಯ, ಹಕ್ಕುಗಳಿಂದ ವಂಚಿತರಾಗಿರುವುದು ಒಂದು ದೊಡ್ಡ ವಿಡಂಬನೆಯಾಗಿ ಅವರಿಗೆ ಕಂಡಿತು. ಇದನ್ನು ಹೋಗಲಾಡಿಸಿ, ಸ್ತ್ರೀಯ ಮಹತ್ವವನ್ನು ಎತ್ತಿಹಿಡಿದು, ಮತ್ತೊಮ್ಮೆ ದೇಶದ ವೈಭವವನ್ನು ಎತ್ತಿ ಹಿಡಿಯಲು ಮಾತೃಪೂಜೆಯನ್ನು ಸ್ವಾಮೀಜಿ ಆರಂಭಿಸಿದರು. ವಿಶೇಷವಾಗಿ, 'ಕುಮಾರಿ ಪೂಜೆ'ಯನ್ನು ಮಾಡುವ ಮೂಲಕ (ಬೇಲೂರು ಮಠದಲ್ಲಿ ದುರ್ಗಾಷ್ಟಮಿಯ ದಿನದಂದು ಕುಮಾರಿಯೊಬ್ಬಳನ್ನು ಕರೆತಂದು, ಅವಳನ್ನು ಅಲಂಕರಿಸಿ ದುರ್ಗಾಮಾತೆಯೆಂದೇ ಪೂಜಿಸುವ ಕ್ರಮ) ಮಾತೃಪೂಜೆ ಹೆಚ್ಚು ಪ್ರಚಾರವಾಯಿತು. ಮೂರನೆಯ ಕಾರಣ, ಸ್ವಾಮೀಜಿಯವರಿಗಾದ ಆಧ್ಯಾತ್ಮಿಕ ಅನುಭವ. ೧೯೦೧ರಲ್ಲಿ ದುರ್ಗಾಪೂಜೆಗೆ ಕೆಲವು ದಿನಗಳ ಮೊದಲು ಬೇಲೂರು ಮಠದಲ್ಲಿ ದುರ್ಗಾಪೂಜೆಯನ್ನು ಮಾಡಿದಂತೆ ಸ್ವಾಮೀಜಿಗೆ ದರ್ಶನವಾಯಿತು. ಅದೇ ಸಮಯಕ್ಕೆ ಸ್ವಾಮಿ ಬ್ರಹ್ಮಾನಂದರೂ ಕೂಡ ದುರ್ಗಾಮಾತೆ ಗಂಗಾನದಿಯನ್ನು ದಾಟಿ ದಕ್ಷಿಣೇಶ್ವರದಿಂದ ಬೇಲೂರು ಮಠಕ್ಕೆ ಬಂದಂತೆ ದರ್ಶನವನ್ನು ಪಡೆದರು. ಕೂಡಲೇ ಸ್ವಾಮೀಜಿ ಬೇಲೂರು ಮಠದಲ್ಲಿ ದುರ್ಗಾಪೂಜೆಗೆ ಸಿದ್ಧತೆ ಮಾಡುವಂತೆ ಸ್ವಾಮಿ ಬ್ರಹ್ಮಾನಂದರನ್ನು ಕೇಳಿಕೊಂಡರು. ದುರ್ಗಾಪೂಜೆಗೆ ಕೆಲವೇ ಸಮಯ ಉಳಿದಿದ್ದರೂ, ಶೀಘ್ರವಾಗಿ ಸಿದ್ಧತೆ ಮಾಡಿ ಆ ವರ್ಷವೇ ದುರ್ಗಾಪೂಜೆಯನ್ನು ಸಾಂಗವಾಗಿ ನೆರವೇರಿಸಿದರು ಸ್ವಾಮೀಜಿ.

ದುರ್ಗಾಪೂಜೆ ಮಾಡಲು ನಿರ್ಧರಿಸಿದ ಕೂಡಲೇ ಸ್ವಾಮೀಜಿ ಮೊದಲು ಮಾಡಿದ ಕಾರ್ಯವೆಂದರೆ ಶ್ರೀಮಾತೆ ಶಾರದಾದೇವಿಯವರ ಅನುಮತಿ ಕೇಳಿದುದು. ಶ್ರೀಮಾತೆಯವರು ಅದಕ್ಕೆ ಹೃದಯಪೂರ್ವಕವಾಗಿ ಅನುಮತಿ ನೀಡಿ ಆಶೀರ್ವದಿಸಿದ್ದಲ್ಲದೆ ಸ್ವತಃ ತಾವೇ ದುರ್ಗಾಪೂಜೆಗೆ ಬಂದು ಎಲ್ಲವನ್ನೂ ನೋಡಿದರು. ಶ್ರೀಮಾತೆಯವರ ಹೆಸರಿನಲ್ಲೇ ದುರ್ಗಾಪೂಜೆ ನಡೆಯಬೇಕೆಂದು ಸ್ವಾಮೀಜಿ ಆದೇಶಿಸಿದರು. ಈ ಪರಂಪರೆ ಈಗಲೂ ಮುಂದುವರಿದಿದೆ. ಶ್ರೀಮಾತೆಯವರು ೧೯೧೨ ಹಾಗೂ ೧೯೧೬ರಲ್ಲಿ ಕೂಡಾ ಬೇಲೂರು ಮಠದಲ್ಲಿ ದುರ್ಗಾಪೂಜೆಯಲ್ಲಿ ಭಾಗವಹಿಸಿದ್ದರು.

ದುರ್ಗಾಪೂಜೆಗೆ ಮೊದಲೇ ಮಠದಲ್ಲಿ ಪ್ರತಿದಿನ 'ಆಗಮನಿ ಸಂಗೀತ' ಹಾಡುವ ಮೂಲಕ ದುರ್ಗಾಮಾತೆಯನ್ನು ಆಹ್ವಾನಿಸಲಾಗುತ್ತದೆ. ದುರ್ಗಾಪೂಜೆಯ ಎಲ್ಲ ಒಂಬತ್ತು ದಿನಗಳಲ್ಲಿ 'ಚಂಡೀಪಾಠ' (ದುರ್ಗಾಸಪ್ತಶತೀ ಪಾರಾಯಣ) ನಡೆಯುವುದು. ಷಷ್ಠಿಯ ದಿನ ಕಲ್ಪಾರಂಭ (ಇದೇ ದಿನ 'ಸಂಕಲ್ಪ' ಮಾಡಲಾಗುವುದು), ಬೋಧನ, ಅಧಿವಾಸ ಮತ್ತು ಆಮಂತ್ರಣ (ಪೂಜೆಗೆ ಸಿದ್ಧತೆ ಹಾಗೂ ಆಹ್ವಾನ) ನಡೆಯುವುದು. ಸಪ್ತಮಿ, ಅಷ್ಟಮಿ ಹಾಗೂ ನವಮಿ ದಿನ ವಿಸ್ತಾರವಾಗಿ ಸಾಂಗೋಪಾಂಗವಾಗಿ ದುರ್ಗಾಪೂಜೆ ನಡೆಯುವುದು. ಅಷ್ಟಮಿಯ ದಿನ ಮಹಾಸ್ನಾನ, ಷೋಡಶೋಪಚಾರ, ನವದುರ್ಗೆಯರ ಪೂಜೆಗಳು ನಡೆದ ಬಳಿಕ ಕುಮಾರಿ ಪೂಜೆ ಹಾಗೂ ಸಂಧಿಪೂಜೆ (ಕಾಳಿಯು ಚಂಡ, ಮುಂಡರನ್ನು ವಧಿಸಿದ ಶುಭಗಳಿಗೆ) ನಡೆಯುವುದು. ನವಮಿಯ ದಿನ ಕೂಡ ಮಹಾಸ್ನಾನ, ಷೋಡಶೋಪಚಾರ ಪೂಜೆಗಳು ನಡೆದು ಬಲಿ, ಹೋಮಗಳು ನಡೆಯುವುವು. ದಶಮಿಯ ದಿನ ದುರ್ಗಾಮಾತೆಯ ವಿಸರ್ಜನೆ ನಡೆಯುವುದು.

ಪ್ರಧಾನವಾಗಿ ದುರ್ಗಾಪೂಜೆ ನಡೆಯುವ ಮೂರೂ ದಿನಗಳಲ್ಲಿ ಲಕ್ಷಾಂತರ ಮಂದಿ ಭಕ್ತರು ಬೇಲೂರು ಮಠದಲ್ಲಿ ಕಿಕ್ಕಿರಿದು ನೆರೆದಿರುತ್ತಾರೆ. ಅವರಿಗೆ ಮಧ್ಯಾಹ್ನದ ವೇಳೆಗೆ ಪ್ರಸಾದ ವಿತರಣೆ ಕೂಡ ನಡೆಯುತ್ತದೆ. ಮಾತೃ ಆರಾಧನೆ ಪ್ರಧಾನವಾಗಿರುವ ಬಂಗಾಳದ ಆಧ್ಯಾತ್ಮಿಕ ಸಂಸ್ಕೃತಿಯ ಪ್ರದೇಶವೆಂಬಂತೆ, ಬೇಲೂರು ಮಠದಲ್ಲಿ ದುರ್ಗಾಪೂಜೆ ಇಂದಿಗೂ ಅತ್ಯಂತ ಉಜ್ವಲವಾಗಿ, ವಿಜೃಂಭಣೆಯಿಂದ ಪ್ರತಿವರ್ಷ ನಡೆಯುತ್ತ ಬಂದಿದೆ.